ನೀರಾವರಿ ಕೆರೆಗಳ ಅಸಮರ್ಪಕ ನಿರ್ವಹಣೆ.

2726 - ಶ್ರೀ ಜೆ.ಸಿ. ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ) : ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಚಿಕ್ಕನಾಯ್ಕನಹಳ್ಳಿ ತಾಲ್ಲೂಕಿನಲ್ಲಿ ನೀರಾವರಿ ಕೆರೆಗಳಿದ್ದು ಇದರ ಮೇಲ್ವಿಚಾರಣೆ ಸಮರ್ಪಕವಾಗಿ ಆಗದೇ ಇರುವುದು ಸರ್ಕಾರಕ್ಕೆ ತಿಳಿದಿದೆಯೇ?*

ಆ) *ಹಾಗಿದ್ದಲ್ಲಿ ಚಿಕ್ಕನಾಯ್ಕನಹಳ್ಳಿಯಲ್ಲಿ ಸಣ್ಣ ನೀರಾವರಿ ಇಲಾಖೆ ಇಲ್ಲದಿರುವುದು ಇದಕ್ಕೆ ಕಾರಣವೆ, ಚಿಕ್ಕನಾಯ್ಕನಹಳ್ಳಿ, ಸಿರಾ ಮತ್ತು ತಿಪಟೂರು ಒಳಗೊಂಡಂತೆ ಚಿಕ್ಕನಾಯ್ಕನಹಳ್ಳಿಯಲ್ಲಿ ಒಂದು ಸಣ್ಣ ನೀರಾವರಿ ಇಲಾಖೆಯನ್ನು ಆರಂಭಿಸಲು ಸರ್ಕಾರ ಕ್ರಮ ಕೈಗೊಳ್ಳುವುದೆ?*

ಶ್ರೀ ಕೆ.ಎಸ್. ಮಲ್ಲಿಕಾರ್ಜುನ ಪ್ರಸನ್ನ (ಸಣ್ಣ ನೀರಾವರಿ ರಾಜ್ಯ ಸಚಿವರು): ಅ) ಚಿಕ್ಕನಾಯ್ಕನಹಳ್ಳಿ ತಾಲ್ಲೂಕಿನ ಕೆರೆಗಳ ಮೇಲ್ವಿಚಾರಣೆ ಸಮರ್ಪಕವಾಗಿ ನಡೆಯುತ್ತಿದೆ.

ಆ) ಚಿಕ್ಕ ನಾಯ್ಕನ ಹಳ್ಳಿ ತಾಲ್ಲೂಕಿನಲ್ಲಿ 148 ಕೆರೆಗಳಿದ್ದು ಈ ಪೈಕಿ 143ಕೆರೆಗಳ ಮೇಲ್ವಿಚಾರಣೆಯನ್ನು ಚಿಕ್ಕ ನಾಯ್ಕನಹಳ್ಳಿಯಲ್ಲಿಯೇ ಇರುವ ಜಿಲ್ಲಾ ಪರಿಷತ್ತಿನ ತಾಂತ್ರಿಕ ಉಪವಿಭಾಗವು ನೋಡಿಕೊಳ್ಳುತ್ತಿದೆ. ಮತ್ತು ಉಳಿದ 5 ಕೆರೆಗಳ ಮೇಲ್ವಿಚಾರಣೆಯನ್ನು ತುಮಕೂರಿನಲ್ಲಿರುವ ಸಣ್ಣ ನೀರಾವರಿ ಉಪ ವಿಭಾಗವು ನೋಡಿಕೊಳ್ಳುತ್ತಿದೆ. ಈ ಕೆರೆಗಳ ಮೇಲ್ವಿಚಾರಣೆ ಸಮರ್ಪಕವಾಗಿ ನಡೆಯುತ್ತಿರುವುದರಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ಜೆ.ಸಿ. ಮಾಧುಸ್ವಾಮಿ : ಈ ರೀತಿ ಉತ್ತರ ಕೊಡುವುದಾದರೆ ಪ್ರಶ್ನೆ ಕೇಳುವುದು ಬೇಕಾಗಿಲ್ಲವೆಂದು ಭಾವಿಸುತ್ತೇನೆ. 143 ಕೆರೆಗಳ ಮೇಲ್ವಿಚಾರಣೆಯನ್ನು ಒಂದೇ ಒಂದು ಜಿಲ್ಲಾ ಪರಿಷತ್ತಿನ ತಾಂತ್ರಿಕ ಸಬ್ ಡಿವಿಜನ್ ಸಮರ್ಪಕವಾಗಿ ನೋಡಿಕೊಳ್ಳುತ್ತಿದೆ ಎಂದು ಹೇಳಿದ್ದಾರೆ. 38 ಕೆರೆಗಳಿಗೆ 100 ರಿಂದ 500 ಎಕರೆವರೆಗೆ ಅಚ್ಚುಕಟ್ಟು ಪ್ರದೇಶ ಇದೆ. 500 ಎಕರೆಮೀರಿದ ಪ್ರದೇಶ ಏನಿದೆ ಇದನ್ನು ನೋಡುವುದಕ್ಕೆ ಯಾವುದೇ ಸಿಬ್ಬಂದಿ ಇಲ್ಲ. ಚಿಕ್ಕನಾಯಕನಹಳ್ಳಿಯಿಂದ ಶಿರಾಕ್ಕೆ, ಶಿರಾದಿಂದ ಮಧುಗಿರಿಗೆ, ಮತ್ತೆ ಅಲ್ಲಿಂದ ತುಮಕೂರಿಗೆ ಸಬ್ ಡಿವಿಜನ್ ಅನ್ನು ಷಿಫ್ಟ್ ಮಾಡಿ ಆ ಒಂದು ಉಪ ವಿಭಾಗವು 5 ಕೆರೆಗಳ ಮೇಲ್ವಿಚಾರಣೆಯನ್ನು ನೋಡಿಕೊಳ್ಳುತ್ತದೆ ಎಂದು ಹೇಳಿದ್ದಾರೆ. ಈ ರೀತಿ ಉತ್ತರಿಸುವುದು ಸರಿಯೆ?

ಶ್ರೀ ಕೆ.ಎಸ್. ಮಲ್ಲಿಕಾರ್ಜುನ ಪ್ರಸನ್ನ : ಚಿಕ್ಕನಾಯಕನಹಳ್ಳಿ ತಾಲ್ಲೂಕಿನಲ್ಲಿ 148 ಕೆರೆಗಳು ಇವೆ. ಅವುಗಳಲ್ಲಿ ನಮ್ಮ ಮೈನರ್ ಇರಿಗೇಷನ್ ಇಲಾಖೆಗೆ ಬರತಕ್ಕವು 5 ಕೆರೆಗಳು ಮಾತ್ರ. ಇನ್ನು ಉಳಿದ 143 ಕೆರೆಗಳು ಜಿಲ್ಲಾ ಪರಿಷತ್ತಿನ ವ್ಯಾಪ್ತಿಗೆ ಬರುತ್ತವೆ. ಆದುದರಿಂದ 5 ಕೆರೆಗೆ ಒಂದು ಸಬ್‌ಡಿವಿಜನ್ ಮಾಡತಕ್ಕದ್ದು ಯೋಗ್ಯ ಅಲ್ಲವೆಂದು ತುಮಕೂರಿಗೆ ಅದನ್ನು ಷಿಫ್ಟ್‌ಮಾಡಿದ್ದೇವೆ.

ಶ್ರೀ ಜೆ.ಸಿ. ಮಾಧು ಸ್ವಾಮಿ : ಸನ್ಮಾನ್ಯ ಅಧ್ಯಕ್ಷರೆ, ಇಡೀ ಜಿಲ್ಲೆಗೆ 100, 125, 130 ಕಿಲೋಮಿಟರ್ ನಲ್ಲಿ ಇಂಜಿನಿಯರ್ ಬಂದು ತೂಬು ಹಾಕಿಸುವವರೆಗೆ ತೂಬು ಎತ್ತಿಕೊಂಡು ಕುಳಿತಿರುತ್ತಾರೆಯೇ ಎಂಬುದು ಒಂದೇ ಪ್ರಶ್ನೆ ಇಲ್ಲಿ. ಮೇಲ್ವಿಚಾರಣೆ ಮಾಡುವುದಕ್ಕೆ ಇಡೀ ಜಿಲ್ಲೆಗೆ ಒಂದೇ ಒಂದು ಸಬ್-ಡಿವಿಷನ್ ಆಫೀಸ್ ಇಟ್ಟು ಕೊಂಡು ಮೈನರ್ ಇರಿಗೇಷನ್ ಇಲಾಖೆ ನಡೆಸುತ್ತೇವೆ ಎಂದರೆ 100 ಕಿಲೋಮಿಟರ್ ಆಚೆ ಇರುವವರು ಯಾರ ಹತ್ತಿರ ಹೋಗಿ ಹೇಳಬೇಕು?

ಶಾಸಕರಾದವರು ಏನು ಮಾಡಬೇಕೆಂಬುದನ್ನು ತಾವು ಅರ್ಥಮಾಡಿಕೊಳ್ಳಬೇಕು. ತಾಂತ್ರಿಕವಾಗಿ ಕೆರೆ 500 ಎಕರೆಯಿಂದ ಮೇಲಿರುವುದು, 31 ಕೆರೆ 100 ಎಕರೆಯಿಂದ ಮೇಲಿರುವುದು, 150 ಎಕರೆಯಿಂದ ಮೇಲಿರುವುದು ಇದೆ. ಅದನ್ನು ನೋಡುವುದಕ್ಕೆ ಒಂದು ಡಿಪಾರ್ಟ್‌ಮೆಂಟ್ ಬೇಡ ಎಂದರೆ ಸಮಂಜಸ ಅಲ್ಲ ಎಂದು ನಾನು ಭಾವಿಸುತ್ತೇನೆ. ಕೃಪೆ ಮಾಡಿ ಅಲ್ಲಿಗೆ ಒಂದು ಕಚೇರಿ ಕೊಡಬೇಕು. ಸಬ್ -ಡಿವಿಷನ್‌ಗಾದರೂ ಒಂದು ಕಚೇರಿ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಕೆ.ಎಸ್. ಮಲ್ಲಿಕಾರ್ಜುನ ಪ್ರಸನ್ನ : ಮಾನ್ಯ ಸಭಾಧ್ಯಕ್ಷರೆ 148 ಕೆರೆಗಳೂ ನಮಗೆ ಬರುವುದಿಲ್ಲ. ಜಿಲ್ಲಾ ಪರಿಷತ್ತಿಗೆ 143 ಕೆರೆಗಳೂ ನಮಗೆ ಬರುವುದಿಲ್ಲ. ಜಿಲ್ಲಾ ಪರಿಷತ್ತಿಗೆ 143 ಕೆರೆಗಳು ಬರುತ್ತವೆ. ವರ್ಕಲೋಡ್ ಜಾಸ್ತಿಯಾದರೆ ತಾವು ಹೇಳಿದ ಸಲಹೆಯನ್ನು ಪರಿಶೀಲಿಸುತ್ತೇನೆ.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ : ಅಧ್ಯಕ್ಷರೆ ಪ್ರಶ್ನೆ ಸಂಖ್ಯೆ ಕೂಡ ಒಂದು ವಾರ ಟೈಮ್ ಬೇಕು ಎಂದು ಪತ್ರ ಬರೆದಿದ್ದೇನೆ.

ಶ್ರೀ ಸಾದತ್ ಅಲಿಖಾನ್ : ಹೋದ ವಾರ ಎರಡು ಪ್ರಶ್ನೆಗಳು ಬಂದಿದ್ದವು ಕ್ವೆಶ್ಚನ್‌ಗೆ ಮೂರು ವಾರ, ಇನ್ನೊಂದು ಕ್ವಶ್ಚನ್‌ಗೆ 2ವಾರ, ಈ ಕ್ವೆಶ್ಚನ್‌ಗೆ ಒಂದು ವಾರ ಟೈಂ ಕೇಳಿದ್ದಾರೆ. ಈ ಸರ್ಕಾರ ಕೆಲಸ ಮಾಡುತ್ತಿದಿಯೋ ಮಲಗಿದೆಯೋ ಏನೋ ಅರ್ಥವಾಗುತ್ತಿಲ್ಲ.

ಅಧ್ಯಕ್ಷರು : ಇಲ್ಲ, ಇಲ್ಲ. ಪ್ರೋಗ್ರೆಸೀವಾಗಿ ರೆಡ್ಯೂಸ್ ಆಗುತ್ತಿದೆ. ನೋಡಿ ಮೂರು ವಾರ ಎಂದು ಹೇಳಿದ್ದರು. ಅದು ಎರಡು ವಾರಕ್ಕೆ ಬಂತು. ಈಗ ಒಂದು ವಾರಕ್ಕೆ ಬಂದಿದ್ದಾರೆ. ಆದ್ದರಿಂದ ಕೆಲಸ ಮಾಡುತ್ತಿದೆ ಸರ್ಕಾರ. ಮುಂದಿನ ವಾರ ಬರುತ್ತದೆ.

ಕಾವೇರಿ ಜಲನಯನ ಪ್ರದೇಶಕ್ಕಾಗಿ ಆಯವ್ಯವ ಹಂಚಿಕೆ.

2477- ಶ್ರೀ ಬಿ.ಹೆಚ್. ಬನ್ನಿಕೋಡ್ (ಹಿರೇಕೆರೂರು) : ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1991-92ನೇ ಸಾಲಿನ ಆಯವ್ಯಯದಲ್ಲಿ ಕಾವೇರಿ ಜಲಾನಯನ ಪ್ರದೇಶದಲ್ಲಿ ಬರುವ ನೀರಾವರಿ ಕಾಮಗಾರಿಗಳಿಗೆ ಮೀಸಲ್ಪಟ್ಟಿರುವ ಹಣ ಎಷ್ಟು?

ಆ) ಸದರಿ ಯೋಜನೆಗಳು ಪೂರ್ಣಗೊಳ್ಳಲು ಅವಶ್ಯವಿರುವ ಹಣವೆಷ್ಟು?

ಇ) ಕೃಷ್ಣಾ ಜಲಾನಯನ ಪ್ರದೇಶದಲ್ಲಿ ಕರ್ನಾಟಕ ಹಕ್ಕಿನ ಪೂರ್ಣ ನೀರನ್ನು ಉಪಯೋಗಿಸಿಕೊಳ್ಳಲು ತೆಗೆದುಕೊಂಡಿರುವ ಹಾಗೂ ತೆಗೆದುಕೊಳ್ಳಬೇಕಾದ ಕಾಮಗಾರಿಗಳು ಯಾವುವು?

ಈ) ಕೃಷ್ಣಾ ಜಲಾನಯನ ಪ್ರದೇಶದ ಯಾವ ಯಾವ ಕಾಮಗಾರಿಗಳಿಗೆ 1991-92 ನೇ ಆಯವ್ಯವಯದಲ್ಲಿ ಎಷ್ಟೆಷ್ಟು ಹಣ ಮೀಸಲಿಡಲಾಗಿದೆ?

ಉ) ಸದರಿ ಯೋಜನೆಗಳನ್ನು ಪೂರ್ಣಗೊಳಿಸಲು ಅವಶ್ಯವಿರುವ ಹಣವೆಷ್ಟು?

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್(ಭಾರಿ ಹಾಗೂ ಮದ್ಯಮ ನೀರಾವರಿ ಸಚಿವರು):

ಅ) 140.47 ಕೋಟಿ ರೂ.ಗಳು.

ಆ) 1475 ಕೋಟಿ ರೂ.ಗಳು.